ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದವರು ಮಾಡಿ ಕೊಂಡಿರುತ್ತಾರೆ. ರಾಜ್ಯ ಹೆದ್ದಾರಿಯಾದ ಬೆಂಗಳೂರು-ಮೈಸೂರು ರಸ್ತೆಯನ್ನು ನಾಲ್ಕು ಪಥಗಳ ಹೆದ್ದಾರಿಯನ್ನಾಗಿ ಮಾಡುವ ಸಮೀಕ್ಷೆ ನಡೆಯುತ್ತಿದೆ.

(ಇ) ರಾಷ್ಟ್ರೀಯ ಹೆದ್ದಾರಿಗಳ ೭೦ ಕಿ.ಮಿ. ಭಾಗಕ್ಕೆ ರೂ. ೯೭೦.೦೦ ಲಕ್ಷ ರೂಗಳು ಬೆಂಗಳೂರು ಮೈಸೂರು ರಾಜ್ಯ ಹೆದ್ದಾರಿಯ ಬಗ್ಗೆ ಸಮೀಕ್ಷೆ ನಡೆಯುತ್ತಿದೆ.

ಕೃಷಿ ಪದ್ಧತಿ ಬಗ್ಗೆ ರೈತರಿಗೆ ತರಬೇತಿ ಕೊಡುವುದು

೧೭೫೫ ಶ್ರೀ ಬಿ. ಎಸ್. ಯಂಡಿಗೂರಪ್ಪ (ಶಿಕಾರಿಪುರ).— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕೃಷಿ ಸಂಶೋಧನಾಲಯಗಳಲ್ಲಿ ರೂಪಿತವಾದ ಕೃಷಿ ಪದ್ಧತಿ ಯೋಜನೆಗಳನ್ನು ಜಾರಿಗೆ ತರುವಲ್ಲಿ ರೈತರಿಗೆ ತರಭೇತಿ ಶಿಬಿರಗಳನ್ನು ವ್ಯವಸ್ಥಿತವಾಗಿ ಏರ್ಪಡಿಸಿ ಬೋಧಿಸುವ ಯೋಜನೆ ಏನಾದರೂ ಸರ್ಕಾರದವರ ಮುಂದಿದೆಯೇ ?

(ಆ) ಈ ಬಗ್ಗೆ ಸುಧಾರಿತ ತಳಿಯ ಬೀಜಗಳ ಸಸ್ಯಗಳನ್ನು ಪ್ರತಿ ತಾಲ್ಲೂಕಿಗೆ ಸಮರ್ಪಕವಾಗಿ ವಿತರಣೆ ಮಾಡಲು ಮಾಡಿರುವ ವ್ಯವಸ್ಥೆಗಳೇನು ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

(ಅ) ಕೃಷಿ ಇಲಾಖೆಯ ವಿಶ್ವ ಬ್ಯಾಂಕಿನ ನೆರವಿನಿಂದ ಕಾರ್ಯಗತವಾಗುತ್ತಿರುವ ರಾಷ್ಟ್ರೀಯ ಕೃಷಿ ವಿಸ್ತರಣಾ ಯೋಜನೆ -೨ರ ಅಡಿಯಲ್ಲಿ ಕೃಷಿ ಸಂಶೋಧನಾಲಯಗಳಲ್ಲಿ ರೂಪಿತವಾದ ಕೃಷಿ ಪದ್ಧತಿಗಳನ್ನು ರೈತಾಪಿ ವರ್ಗದವರಿಗೆ ಬೋಧಿಸುವ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಹಾಗೂ ಕ್ರಮಬದ್ಧವಾಗಿ ಅಳವಡಿಸಿಕೊಳ್ಳಲಾಗಿದೆ.

(ಆ) ಕೃಷಿ ಸಂಶೋಧನಾಲಯಗಳಲ್ಲಿ ಅಭಿವೃದ್ಧಿ ಪಡಿಸಿರುವ ಹೊಸ ತಳಿಗಳ ತಳಿವರ್ಧಕ ಬೀಜಗಳನ್ನು ಮೂಲ ಮತ್ತು ಪ್ರಮಾಣಿತ ಬೀಜಗಳನ್ನು ವಿವಿಧ ಹಂತಗಳಲ್ಲಿ ಉತ್ಪಾದಿಸಿ ಪ್ರಮಾಣಿತ ಬೀಜಗಳನ್ನು ಕರ್ನಾಟಕ ರಾಜ್ಯ ಬೀಜ ನಿಗಮ, ಕರ್ನಾಟಕ ರಾಜ್ಯ ಎಣ್ಣೆ ಕಾಳು ಬೆಳೆಗಾರರ ಮಹಾ ಮಂಡಲಿ ಮತ್ತು ರಾಷ್ಟ್ರೀಯ ಬೀಜ ನಿಗಮಗಳಿಂದ ಹಾಗೂ ಖಾಸಗಿ ಸಂಸ್ಥೆಗಳಿಂದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿರುವ ಸದರಿ ಸಂಸ್ಥೆಗಳ ಅಧಿಕೃತ ವ್ಯಾಪಾರಿಗಳ ಮೂಲಕ ರೈತರಿಗೆ ವಿತರಣೆ ಮಾಡುವ ವ್ಯವಸ್ಥೆ ಮಾಡಲಾಗಿದೆ.

ತೆಂಗು ಅಭಿವೃದ್ಧಿ ಮಂಡಳಿ ಸಂಶೋಧನಾ ಕೇಂದ್ರ ಸ್ಥಾಪಿಸುವುದು

೧೭೬೫ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಕೇಂದ್ರ ಸರ್ಕಾರವು ತೆಂಗು ಅಭಿವೃದ್ಧಿ ಮಂಡಳಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದ್ದು ಅದಕ್ಕಾಗಿ ಆಯ್ಕೆ ಮಾಡಲಾಗಿರುವ ಸ್ಥಳ ಯಾವುದು ?

(ಆ) ಸದರಿ ಕೇಂದ್ರವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸುವಂತೆ ಸರ್ಕಾರದವರು ಶಿಫಾರಸು ಮಾಡಿರುತ್ತಾರೆಯೇ ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಮಂತ್ರಿಗಳು),—

(ಅ) ಇಲ್ಲ

(ಆ) ಉದ್ಭವಿಸುವುದಿಲ್ಲ.